# 14. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ರಾಗಿಹಕ್ಕಲು,



## ಪೀಠಿಕೆ

ಹಚ್ಚ ಹಸಿರಿನಿಂದ ಕಂಗೊಳಿಸುವ ಮಲೆನಾಡಿನ ಹೆಬ್ಬಾಗಿಲು ಎಂದು ಪ್ರಸಿದ್ಧವಾಗಿರುವ ಶಿವಮೊಗ್ಗ ಜಿಲ್ಲೆ, ತೀರ್ಥಹಳ್ಳಿ ತಾಲ್ಲೂಕಿನಲ್ಲಿರುವ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ರಾಗಿಹಕ್ಕಲು 1998–99 ರಲ್ಲಿ ಪ್ರಾರಂಭವಾಗಿ ಸುಮಾರು 20 ವರ್ಷಗಳಾಗಿವೆ.

ಪ್ರಾರಂಭದಲ್ಲಿ ಏಕೋಪಾಧ್ಯಾಯ ಶಿಕ್ಷಕರು ಕರ್ತವ್ಯ ನಿರ್ವಹಿಸುತ್ತಿದ್ದು, 4 ರಿಂದ 5 ಮಕ್ಕಳ ದಾಖಲಾತಿಯನ್ನು ಹೊಂದಿದ್ದು, ನಂತರದ ದಿನಗಳಲ್ಲಿ 10 ರಿಂದ 12 ಮಕ್ಕಳು ದಾಖಲಾತಿಯನ್ನು ಹೊಂದಿದ್ದು, 2012–13 ನೇ ಸಾಲಿನಲ್ಲಿ ಶಾಲೆಯನ್ನು ಮುಚ್ಚಿ ಪಕ್ಕದ ಶಾಲೆಗೆ ವಿಲೀನಗೊಳಿಸಲು ಇಲಾಖೆಯಿಂದ ಆದೇಶ ಬಂದಿತ್ತು. ಆದರೆ ಎಸ್.ಡಿ.ಎಂ.ಸಿ. ಪೋಷಕರು, ಗ್ರಾಮಸ್ಥರು ಸೇರಿಕೊಂಡು ಶಾಲೆಯನ್ನು ಮುಚ್ಚಲು ಬಿಡದೆ ತಮ್ಮ ಮಕ್ಕಳು 4 ನೇ ತರಗತಿಯಿಂದ 5 ನೇ ತರಗತಿಗೆ ಪಕ್ಕದ ಶಾಲೆಗೆ ವರ್ಗಾವಣೆ ಪತ್ರ ಪಡೆದುಕೊಂಡು ಹೋಗಿದ್ದ ತಮ್ಮ ಮಕ್ಕಳನ್ನು ಪುನಃ ಇದೇ ಶಾಲೆಗೆ ದಾಖಲಿಸಿ 5 ನೇ ತರಗತಿಯನ್ನು ಪ್ರಾರಂಭಿಸಿ ಶಾಲೆಯನ್ನು ಉಳಿಸಿಕೊಂಡರು.

2015–16 ರಲ್ಲಿ ಇನ್ನೊಬ್ಬ ಶಿಕ್ಷಕರು ವರ್ಗಾವಣೆಯ ಮೂಲಕ ನಮ್ಮ ಶಾಲೆಗೆ ಬಂದಿದ್ದು ಈಗ ಇಬ್ಬರು ಶಿಕ್ಷಕರು ಕರ್ತವ್ಯ ನಿರ್ವಹಿಸುತ್ತಿದ್ದು, ಪ್ರಸ್ತುತ 2018–19 ನೇ ಸಾಲಿನಲ್ಲಿ 15 ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ.

ನಮ್ಮ ಶಾಲೆಯು ಪ್ರಾರಂಭದ ದಿನದಿಂದ ಇಲ್ಲಿಯವರೆಗೂ ನಿಧಾನವಾಗಿ ಅಭಿವೃದ್ಧಿಯನ್ನು ಹೊಂದುತ್ತಾ ಮೂಲಭೂತವಾಗಿ ಬೇಕಾಗಿರುವ ಸೌಲಭ್ಯಗಳನ್ನು ಪಡೆದುಕೊಳ್ಳುತ್ತಾ ಸಾಗುತ್ತಿರುವ 'ಶಾಲಾ ಯಶೋಗಾಥೆ' ಯು ಈ ರೀತಿ ಬಿತ್ತರವಾಗಿದೆ.

## ಶಾಲೆಯ ಹಳೆಯ ಕಟ್ಟಡ



ಪ್ರಾರಂಭದಲ್ಲಿ ಒಂದು ಮನೆಯಲ್ಲಿ ಪ್ರಾರಂಭವಾದ ನಮ್ಮ ಶಾಲೆಯು 1998–99 ರಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆಯ ಸೌಲಭ್ಯದಿಂದ ಒಂದು ಕಟ್ಟಡ ನಿರ್ಮಿಸಿಕೊಂಡು, ನಂತರ 2004–05 ಸರ್ವ ಶಿಕ್ಷಣ ಅಭಿಯಾನದಿಂದ ಇನ್ನೊಂದು ಕಟ್ಟಡ ನಿರ್ಮಿಸಲಾಯಿತು. 2005–06 ರಲ್ಲಿ ಸರ್ವ ಶಿಕ್ಷಣ ಅಭಿಯಾನದಿಂದ ಅಕ್ಷರ ದಾಸೋಹ ಯೋಜನೆಯಡಿ ಅಡುಗೆಕೋಣೆ ನಿರ್ಮಾಣ ಮಾಡಿ ಮಕ್ಕಳು ಬಿಸಿಯೂಟದ ಪ್ರಯೋಜನವನ್ನು ಪಡೆದುಕೊಳ್ಳಲು ಅವಕಾಶ ಕಲ್ಪಿಸಲಾಯಿತು. ನಂತರದ ದಿನಗಳಲ್ಲಿ ಪೋಷಕರು, ಸ್ಥಳೀಯರು ಸೇರಿಕೊಂಡು ಶಾಲಾ ಆವರಣದ ಸುತ್ತ ತಂತಿ ಬೇಲಿಯನ್ನು ನಿರ್ಮಿಸಿ ಶಾಲೆಗೆ ಭದ್ರತೆಯನ್ನು ಕಲ್ಪಿಸಿದರು.

ಆದರೆ ಇತ್ತೀಚಿಗೆ ಪ್ರಾರಂಭದಲ್ಲಿ ನಿರ್ಮಾಣ ಮಾಡಿದ ಕೊಠಡಿಯು ಶಿಥಿಲಗೊಂಡಿದ್ದರಿಂದ ತರಗತಿಯನ್ನು ನಡೆಸಲು ಸಾಧ್ಯವಾಗದೇ ಮಕ್ಕಳನ್ನು ಹೊರಗೆ ಕೂರಿಸಿಕೊಂಡು ಪಾಠಪ್ರವಚನ ಮಾಡುತ್ತಿದ್ದೆವು ಇದರಿಂದ ಮಕ್ಕಳಿಗೆ ಮಳೆಗಾಲದಲ್ಲಿ ತೊಂದರೆ ಆಗುತ್ತಿತ್ತು. ಈ ಕೊಠಡಿಯನ್ನು ದುರಸ್ತಿ ಮಾಡಿಸಿಕೊಡಲು ಇಲಾಖೆ, ಹಾಗೂ ಸ್ಥಳೀಯ ಗ್ರಾಮಪಂಚಾಯತ್‌ಗೆ ಲಿಖಿತ ರೂಪದಲ್ಲಿ ಎಸ್.ಡಿ.ಎಂ.ಸಿ ಯವರು, ಶಿಕ್ಷಕರು ಸೇರಿ ಮನವಿ ಮಾಡಿಕೊಂಡಿದ್ದೆವು. ಇದರ ಫಲವಾಗಿ ಎಸ್.ಡಿ.ಎಂ.ಸಿ. ಗ್ರಾಮ ಪಂಚಾಯತ್ ಸ್ಥಳೀಯ ಜನಪ್ರತಿನಿಧಿಗಳು ಹಾಗೂ ಶಿಕ್ಷಕರ ಸತತ ಪ್ರಯತ್ನದಿಂದ ಈ ವರ್ಷದಲ್ಲಿ ಸ್ಥಳೀಯ ಶಾಸಕರ ಅನುದಾನದಿಂದ

ಹಳೆಕೊಠಡಿಯನ್ನು ನೆಲಸಮಗೊಳಿಸಿ ಹೊಸ ಕೊಠಡಿ ನಿರ್ಮಿಸಲು ಅನುದಾನ ದೊರೆತಿದ್ದು, ಕೊಠಡಿಯ ನಿರ್ಮಾಣ ಕಾರ್ಯವು ನಿರ್ಮಾಣ ಹಂತದಲ್ಲಿರುತ್ತದೆ.

**ವ್ಯವಸ್ಥಿತ ಕುಡಿಯುವ ನೀರು ಮತ್ತು ಶೌಚಾಲಯದ ವ್ಯವಸ್ಥೆ:-**

ನಮ್ಮ ಶಾಲೆಯಲ್ಲಿರುವ ಕುಡಿಯುವ ನೀರಿನ ವ್ಯವಸ್ಥೆಯು ತುಂಬಾ ಉತ್ತಮವಾಗಿದ್ದು ಶಾಲೆಯ ಪ್ರಾರಂಭದ ದಿನದಿಂದ 2015-16 ರ ವರೆಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ದಾನಿಗಳಾದ ಶ್ರೀಯುತ ಕೋಟೇಶ್ವರ ಐತಾಳ್ ಇವರು ನೀಡುತ್ತಿದ್ದರು. ನಂತರ ಜಿಲ್ಲಾ





ಪಂಚಾಯತಿಯಿಂದ ಶಾಲೆಗೆ ಕೊಳವೆ ಬಾವಿಯನ್ನು ತೆಗೆಸಿ ಶಾಲೆಗೆ ನಿರಂತರವಾಗಿ ಶುದ್ಧ ಕುಡಿಯುವ ನೀರು ಸಿಗಲು ಅವಕಾಶ ಮಾಡಿಕೊಟ್ಟಿದ್ದಾರೆ. ನಮ್ಮ ಶಾಲೆಯಲ್ಲಿ ಇರುವ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ, ಶೌಚಾಲಯದ ವ್ಯವಸ್ಥೆಯು ಸ್ವಚ್ಛವಾಗಿ ಇರುವಂತೆ ನಿರ್ವಹಿಸಲಾಗುತ್ತಿದೆ. ಇದಕ್ಕೆ ಬೇಕಾಗುವ ಫಿನಾಯಿಲ್, ಬ್ಲೀಚಿಂಗ್ ಪೌಡರ್ ಗಳನ್ನು ಬಳಸಿಕೊಂಡು ಸ್ವಚ್ಛವಾಗಿ ಇಟ್ಟುಕೊಳ್ಳುತ್ತಿದ್ದೇವೆ.

# ಶಾಲಾ ಆವರಣ, ಕೈತೋಟ

ನಮ್ಮ ಶಾಲೆಯು ಗುಡ್ಡ ಪ್ರದೇಶದಲ್ಲಿದ್ದರೂ ಸಹ ಮಕ್ಕಳು ಪೋಷಕರು ಶಿಕ್ಷಕರುಗಳ ಪ್ರೋತ್ಸಾಹ ಹಾಗೂ ಉತ್ಸಾಹದಿಂದ ಶಾಲಾ ಆವರಣದ ಸುತ್ತ ಮುತ್ತ ವಿವಿಧ ರೀತಿಯ ಆಕರ್ಷಕ ಹೂವಿನ ಗಿಡಗಳನ್ನು ಮತ್ತು ತರಕಾರಿ ಗಿಡಗಳನ್ನು ಹಾಕಿ ಶಾಲೆಯ ಸೌಂದರ್ಯವನ್ನು ಕಾಪಾಡಿಕೊಂಡು ಬರಲಾಗುತ್ತಿದೆ. ಅದೇ ರೀತಿ ಶಾಲಾ ಮುಂಭಾಗವನ್ನು ಹಸಿರಿನಿಂದ ಕಂಗೊಳಿಸುವಂತೆ ಮಾಡಿದ್ದೇವೆ. ಇದಕ್ಕೆ ಶಿಕ್ಷಕರು ಮಕ್ಕಳೊಂದಿಗೆ ಬಿಡುವಿನ ವೇಳೆಯಲ್ಲಿ ಗಿಡಗಳನ್ನು ನೆಡುವುದು ಕಳೆ ತೆಗೆಯುವುದು ಮನೆಯಲ್ಲಿರುವ ಹೂ ಗಿಡಗಳನ್ನು ತಂದು ಶಾಲೆಯಲ್ಲಿ ನೆಡುತ್ತಾರೆ. ಹೀಗಾಗಿ ಶಾಲಾ ಮುಂಭಾಗವು ಸುಂದರವಾಗಿ ಕಾಣಲು ಸಾಧ್ಯವಾಗಿದೆ.



**ಶಾಲಾ ಆವರಣದಲ್ಲಿ ಅಂಗನವಾಡಿ ಕೇಂದ್ರ ಇರುವ ಬಗ್ಗೆ**

ನಮ್ಮ ಶಾಲೆಯ ಆವರಣದಲ್ಲಿ ಅಂಗನವಾಡಿ ಕೇಂದ್ರ ಇರುವುದರಿಂದ ಅಲ್ಲಿನ ಮಕ್ಕಳು ನಮ್ಮ ಶಾಲೆಯ ಮಕ್ಕಳೊಂದಿಗೆ ಮುಕ್ತವಾಗಿ ಬೆರೆಯುವುದರಿಂದ ಶಾಲೆಗೆ ದಾಖಲಾಗಲು ಯಾವುದೇ ಅಂಜಿಕೆ ಇಲ್ಲದೇ ಪ್ರವೇಶವನ್ನು ಪಡೆಯುತ್ತಾರೆ. ಇದೂ ಸಹ ನಮ್ಮ ಶಾಲೆಯ ದಾಖಲಾತಿ ಹೆಚ್ಚಿಸುವಲ್ಲಿ ಸಹಕಾರಿಯಾಗಿದೆ.

**ಶಾಲಾ ಆಟದ ಮೈದಾನ** :ನಮ್ಮ ಶಾಲೆಯು ಇಳಿಜಾರಿನಿಂದ ಕೂಡಿರುವುದರಿಂದ ಪ್ರಾರಂಭದಲ್ಲಿ ಆಟದ ಮೈದಾನ ಇರಲಿಲ್ಲ. 2015–16 ರಲ್ಲಿ ಚಿಕ್ಕದಾದ ಆಟದ ಮೈದಾನವನ್ನು ಗ್ರಾಮಪಂಚಾಯತ್ ವತಿಯಿಂದ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ಚಿಕ್ಕದಾದ ಆಟದ ಮೈದಾನವನ್ನು ಸಮತಟ್ಟಾಗಿ ಮಾಡಿಕೊಡಲಾಗಿದೆ.

**"ವ್ಯಕ್ತಿಯನ್ನು ಸದಾ ಜಾಗೃತದಲ್ಲಿಡಲು ಶಿಕ್ಷಣ ಬೇಕು"**

**"ಶಿಕ್ಷಣ ಕೊಡಿಸಿರಿ, ಮಕ್ಕಳ ಬಾಳು ಬೆಳಗಿಸಿರಿ"**

**"ವಂದನೆಗಳೊಂದಿಗೆ"**